**<u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಓಎಸ್  5/2023</u>**

ಪಿ ಡಬ್ಲ್ಯೂ -1

**<u>ದಿನಾಂಕ 27-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**
**<u>ಪಾಟೀ ಸವಾಲು ಶ್ರೀ  ಕೆ ಎವ್ ಕೆ  ಪ್ರತಿವಾದಿ ಪರ ವಕೀಲರುಃ</u>**

ನಾನು 7 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ಪ್ರಸ್ತುತ ಖಾಸಗಿ ಸಂಸ್ಥೆಯಲ್ಲಿ  2000 ದಿಂದ ಕೆಲಸ ಮಾಡುತ್ತಿದ್ದೇನೆ. ಶ್ರೀರಾಮ ಸಕ್ಕರೆ ಕಾರ್ಖಾನೆ ಎಂದರೆ ಸರಿಯಲ್ಲ. ಅದು ಅರೆಕಾಲಿಕ ಸರ್ಕಾರಿ ಖಾರ್ಕಾನೆ. ಪ್ರತಿವಾದಿಗಳು ಆ ಸಮಯದಲ್ಲಿ ಬೇರೆ ವಾಸವಾಗಿದ್ದರು ಎಂದರೆ ಸರಿಯಲ್ಲ ಒಟ್ಟಿಗೆ ಇದ್ದೇವು. ನಿಪಿ-10 ಕ್ಕೂ ದಾವಾ  ಷೆಡ್ಯೂಲ್ ಸ್ವತ್ತಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಪಿ-7 ಸೇವಾ ಪುಸ್ತಕವನ್ನು ಸಂಬಂಧ ಇರದೆ ಇದ್ದರೂ ಸೃಷ್ಟಿಕೊಂಡಿದ್ದೇವೆ ಎಂದರೆ ಸರಿಯಲ್ಲ.

2. ದಾವಾ ಸ್ವತ್ತು  1 ನೇ ಪ್ರತಿವಾದಿಯ ಹೆಸರಿಗೆ  1995-96 ರಲ್ಲಿ ಮಂಜೂರಾಗಿರುತ್ತದೆ ಸಾಕ್ಷಿ ಮುಂದುವರೆದು ನಮಗೆ ಗೊತ್ತಿಲ್ಲದ ಹಾಗೆ ಮಂಜೂರು ಮಾಡಿಕೊಂಡಿರುತ್ತಾರೆ. ದಾವಾ ಸ್ವತ್ತಿನಲ್ಲಿರುವ  ದೇವಸ್ಥಾನದಲ್ಲಿ ಪ್ರತಿವಾದಿಗಳು ಪೂಜೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಎಲ್ಲರೂ ಒಟ್ಟಾಗಿ ಪೂಜೆ ಮಾಡುತ್ತಿದ್ದಾರೆ. ನಿಪಿ-7 ಪೊಟೋ ದೇವಸ್ಥಾನದ ಬಳಿ ಯಾರು ಇಲ್ಲದಾಗ ಹೊರಗಡೆಯಿಂದ ತೆಗೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

3. ದೇವಸ್ಥಾನದ ಒಳಗಡೆ ಸಾರ್ವಜನಿಕರನ್ನು ಬಿಡುವುದಿಲ್ಲ ಕೇವಲ  ಸಂಬಂಧಿಸಿದವರನ್ನು ಮಾತ್ರ  ಬಿಡುತ್ತಾರೆ. ದಿಃ 09-03-2017 ರಲ್ಲಿ  ಈ ಹಿಂದೆ  ದಾವಾ ಸ್ವತ್ತುಗಳನ್ನು  ವಿಭಾಗ ಮಾಡಿಕೊಂಡಿದ್ದು ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದರೆ ವಿಭಾಗದ ಕುರಿತು ತಿಳಿದು ಬರುತ್ತದೆ ಎಂದು  ಮರೆಮಾಚಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ 20 ಸಾವಿರ ಹಣವನ್ನು ನೀಡಿರುವುದಾಗಿ ತೋರಿಸಿದ್ದಾರೆ ಎಂದರ ಸರಿಯಲ್ಲ.

4. ದಾವಾ ಸ್ವತ್ತು 1 ನೇಪ್ರತಿವಾದಿಗೆ ಸೇರಿದ್ದು ಅದರಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿದ್ದರೆ ಅದನ್ನು ನಿಪಿ-2 ರಲ್ಲಿ ತೋರಿಸಬಹುದಾಗಿತ್ತು ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದ ಹಾಗೆ ಮಾಡಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ದಾವಾ ಸ್ವತ್ತುಗಳನ್ನು ಹೊಡೆಯಲು ನಾನು ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತು 1ನೇ ಪ್ರತಿವಾದಿಗೆ ಸೇರಿದ್ದಾಗಿದ್ದು ಬೇರೆ ಯಾವ ಕಕ್ಷಿದಾರರಿಗೂ ಯಾವುದೇ ಹಕ್ಕು ಹಿತಾಸಕ್ತಿ ಇರದೇ ಇದ್ದರೂ ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ